ಓ.ಎಸ್.ನಂ.184/2025

ಪಿ ಡಬ್ಲ್ಯೂ: 1

ದಿನಾಂಕ 30.07.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲು: 2 ರಿಂದ 7 ನೇ ಪ್ರತಿವಾದಿ ಪರ ವಕೀಲರಿಂದ:**

ನನ್ನ ತಂದೆ ಮರಣ ಹೊಂದಿ ಸುಮಾರು 20 ವರ್ಷಗಳಾಗಿರುತ್ತದೆ. ನನ್ನ ತಂದೆಯ ಜೀವಂತ ಕಾಲದಲ್ಲಿ ದಾವಾ ಆಸ್ತಿಗಳಲ್ಲಿ ಹಿಸ್ಸಾ ಹಕ್ಕು ಕೇಳಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ತಂದೆ ಮತ್ತು ಊರಿನವರ ಸಮಕ್ಷಮ ಆಸ್ತಿಯ ಬದಲಾಗಿ ಹಣ ಮತ್ತು ಬಂಗಾರ ನೀಡಲಾಗಿದೆ ಎಂದರೆ ಸರಿಯಲ್ಲ. ನನ್ನ ತಂದೆಯ ಮರಣದ ನಂತರ ನನ್ನ ಸಹೋದರರಿಗೆ ಹಿಸ್ಸಾ ಹಕ್ಕು ಕೇಳಿರುವುದಿಲ್ಲ. ದಾವಾ ಆಸ್ತಿಗಳು ಯಾರ ಹೆಸರಿನಲ್ಲಿ ಮತ್ತು ಯಾರ ಕಬ್ಜಾದಲ್ಲಿ ಇದೆ ಎಂದು ನನಗೆ ವ್ಯಯಕ್ತಿಕ ಮಾಹಿತಿ ಇರುವುದಿಲ್ಲ.

**2.** 8 ನೇ ಪ್ರತಿವಾದಿ ಮತ್ತು 1 ನೇ ಪ್ರತಿವಾದಿಯ ತಾಯಿ ನಮ್ಮ ಜೊತೆ ವಾಸ ಇರುತ್ತಾರೆ ಎಂದರೆ ಸರಿ. ದಾವಾ 2 ನೇ ಆಸ್ತಿಯನ್ನು 8 ನೇ ಪ್ರತಿವಾದಿ ಸಾಬಪ್ಪ ತಂದೆ ಭಿಮರಾಯ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿಯ ನಂತರ ಕಂದಾಯ ದಾಖಲೆಗಳು ವರ್ಗಾವಣೆಯಾಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿಯ ಕುರಿತು 8 ನೇ ಪ್ರತಿವಾದಿ ನನಗೆ ತಿಳಿಸಿರುವುದಿಲ್ಲ. ದಾವಾ 5 ನೇ ಆಸ್ತಿಯನ್ನು ನನ್ನ ತಂದೆಯ ಜೀವಂತ ಕಾಲದಲ್ಲಿ ಗರಡಿಮನಿ ಶಿವಣ್ಣ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯನ್ನು ಶಿವಣ್ಣ ಉಳಿಮೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ.

**3.** ನಾಗೇನಹಳ್ಳಿಯಲ್ಲಿ ನನ್ನ ತಂದೆಗೆ ಪಿತ್ರಾರ್ಜಿತವಾಗಿ ಒಂದು ಹಳೆ ಮನೆ ಬಂದಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಯನ್ನು ಮತ್ತು ದಾವಾ 2 ಮತ್ತು 5 ನೇ ಆಸ್ತಿಗಳ ಖರೀದಿದಾರರನ್ನು ಸೇರಿಸದ ಕಾರಣ ಈ ದಾವೆ ಊರ್ಜಿತವಾಗತಕ್ಕದಲ್ಲ ಎಂದರೆ ಸರಿಯಲ್ಲ. ನಾನು ಈಗಾಗಲೇ ಹಣ ಮತ್ತು ಬಂಗಾರ ಪಡೆದುಕೊಂಡಿರುವ ಕಾರಣ ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಿಸ್ಸಾ ಹಕ್ಕು ಇಲ್ಲಾ ಎಂದರೆ ಸರಿಯಲ್ಲ.

**4.** 6 ಮತ್ತು 7 ನೇ ಪ್ರತಿವಾದಿಗಳು ನನಗೆ ಸಂಬಂದದಲ್ಲಿ ಅಳಿಯ ಮತ್ತು ಸೊಸೆಯಾಗಬೇಕು. ಅವರುಗಳ ತಂದೆ ತಾಯಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರು ಅಜ್ಜ ಅಜ್ಜಿಯ ಮನೆಯಲ್ಲಿ ವಾಸ ಇರುತ್ತಾರೆ ಎಂದರೆ ಸರಿ. ಸದರಿ ಪ್ರತಿವಾದಿಗಳ ಆಸ್ತಿಯನ್ನು 8 ನೇ ಪ್ರತಿವಾದಿ ನೋಡಿಕೊಂಡಿರುತ್ತಾನೆ ಎಂದರೆ ಸರಿ. 8 ನೇ ಪ್ರತಿವಾದಿಯ ಬಳಿ ದಾವಾ

ಆಸ್ತಿಯನ್ನು ಲಾವಣಿ ನೀಡುವಂತೆ ಕೇಳಲಾಗಿತ್ತು ಎಂದರೆ ಸರಿಯಲ್ಲ. ಆ ಸಮಯದಲ್ಲಿ 8 ನೇ ಪ್ರತಿವಾದಿಯು ಲಾವಣಿಗೆ ಹಣ ನೀಡುವುದಿಲ್ಲ ಎಂದು 6 ಮತ್ತು 7 ನೇ ಪ್ರತಿವಾದಿಗಳಿಗೆ ತಿಳಿಸಿರುತ್ತಾರೆ ಎಂದರೆ ಸರಿ. ಆ ಕಾರಣ 8 ನೇ ಪ್ರತಿವಾದಿ ನನ್ನೊಂದಿಗೆ ಮಿಲಾಪಿಯಾಗಿ ಈ ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಆ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು.

ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.